# ಮಾಂಡು ಕಿ ಇಮ್ಲಿ

## ಮಾಂಡುವಿನಲ್ಲಿ ಕಂಡ ಬಾವೋಬಾಬ್ ಮರಗಳು

**ಆಫ್ರಿಕಾ ಮೂಲಕ ಬಾವೋಬಾಬ್ ಮರ ಮಧ್ಯಪ್ರದೇಶದ ಮಾಂಡುವಿನಲ್ಲೂ ಇದೆ. 'ಮಾಂಡು ಕಿ ಇಮ್ಲಿ ಪೇಡ್' ಎಂದು ಕರೆಸಿಕೊಳ್ಳುವ ಆ ಮರಗಳು, ಮಾಂಡುವಿನ ಸಂಸ್ಕೃತಿಯ ಭಾಗವೇ ಆಗಿವೆ ಹಾಗೂ ಸಾವಿರಾರು ವರ್ಷಗಳ ಹಿಂದೆ ನಡೆದ ಸಾಂಸ್ಕೃತಿಕ ಕೊಡು–ಕೊಳು ಸಂಬಂಧದ ಕಥೆ ಹೇಳುವಂತಿವೆ.**

■ ಡಿ.ಜಿ. ಮಲ್ಲಿಕಾರ್ಜುನ

ಮಧ್ಯಪ್ರದೇಶದಲ್ಲಿ ಸುಮಾರು ಒಂದು ವರ್ಷ ಕಾಲ (1976–77) ವ್ಯಾಪಕವಾಗಿ ಸುತ್ತಾಡಿ, ತಮ್ಮ ಕ್ಯಾಮೆರಾ ಹಾಗೂ ಚಿಕಿತ್ಸಕ ಕಣ್ಣುಗಳ ಮೂಲಕ ಕಂಡದ್ದನ್ನು ಮೂರು ಪ್ರವಾಸ ಕಥನಗಳಾಗಿ ನೀಡಿದವರು, ಕೃಷ್ಣಾನಂದ ಕಾಮತರು. ಅವರ 'ಮಧ್ಯಪ್ರದೇಶದ ಮಡಿಲಲ್ಲಿ' ಕೃತಿಯನ್ನು ಓದಿದ್ದ ನಾನು ಇಂದೋರಿನಿಂದ 'ಮಾಂಡು'ವಿಗೆ ಹೋಗುವಾಗ, ಬಸ್ಸು ವಿಂಧ್ಯ ಪರ್ವತಗಳನ್ನೇರುವಾಗ, ನನ್ನ ಮನಸ್ಸಿನಲ್ಲಿ ಗುಂಗಿಯಂತೆ ಕಾಡುತ್ತಿದ್ದುದು ಅವರ – 'ರಾಣಿ ರೂಪಮತಿಯ ಮಾಂಡು' ಲೇಖನ.

ಇಂದೋರಿನಿಂದ ಸುಮಾರು ನೂರು ಕಿ.ಮೀ. ದೂರವಿರುವ ಮಾಂಡು, ಧಾರ್ ಜಿಲ್ಲೆಯಲ್ಲಿದೆ. ಮಾಂಡವ, ಮಾಂಡವದುರ್ಗ ಎಂದು ಕರೆಸಿಕೊಳ್ಳುತ್ತಿದ್ದ ಮಾಂಡು, ಕ್ರಿ.ಶ. 5–6ನೇ ಶತಮಾನದಿಂದ 15–16ನೇ ಶತಮಾನದವರೆಗಿನ ಹಲವಾರು ಐತಿಹಾಸಿಕ ಸ್ಮಾರಕಗಳನ್ನು ಹೊಂದಿದೆ.

ನಾವು ಮಾಂಡುವಿನಲ್ಲಿ ಬಸ್ ಇಳಿದು, ಆಟೊ ರಿಕ್ಷಾ ಏರಲು ರಸ್ತೆ ದಾಟುವಾಗ ಎದುರಿಗೆ ಬೃಹದಾಕಾರದ ಮರ ಕಾಣಿಸಿತು. ಅರೆ! ಇದು ಬಾವೋಬಾಬ್ ಮರ ಅಲ್ವಾ! ಆಫ್ರಿಕಾ ಮೂಲದ ಮರ ಇಲ್ಲಿ ಹೇಗೆ ಬಂತು ಎಂದು ಅಚ್ಚರಿಯಾಯಿತು. ಆಟೊ ಚಾಲಕನನ್ನು 'ಇದು ಯಾವ ಮರ?' ಎಂದು ಕೇಳಿದೆ. ಆತ 'ಮಾಂಡು ಕಿ ಇಮ್ಲಿ ಪೇಡ್' ಎಂದು ಹೇಳಿದ. ಹಾಗೇ ಮುಂದೆ ಹೋದಂತೆ ಹಲವಾರು ಬಾವೋಬಾಬ್ ಮರಗಳು ಕಂಡವು.

ಮಾಂಡು ಸ್ಮಾರಕಗಳಿರುವ ಪ್ರದೇಶದ ಬಳಿ ಆಟೊ ನಿಂತಾಗ, ಚಾಲಕ, ಅಲ್ಲೇ ಪಕ್ಕದಲ್ಲಿ ದೊಡ್ಡ ಗಾತ್ರದ ಕಾಯಿಗಳನ್ನು ಮಂಕರಿಯಲ್ಲಿಟ್ಟುಕೊಂಡು ಮಾರಲು ಕುಳಿತಿದ್ದ ಗ್ರಾಮೀಣ ಮಹಿಳೆಯನ್ನು ತೋರಿಸಿ, 'ನೋಡಿ, ಮಾಂಡು ಕಿ ಇಮ್ಲಿ ಮಾರುತ್ತಿದ್ದಾರೆ. ಬೇಕಿದ್ದರೆ ಕೊಂಡು ರುಚಿ ನೋಡಿ' ಎಂದು ಹೇಳಿದ. ಆ ಮಹಿಳೆ ಒಂದು ಮಂಕರಿಯಲ್ಲಿ ಕಾಯಿಗಳನ್ನೂ ಇನ್ನೊಂದರಲ್ಲಿ ಬಿಳಿ ಬಣ್ಣವಿದ್ದ ಅದರ ತಿರುಳನ್ನು ತುಂಡುಗಳನ್ನಾಗಿಸಿ, ಚಿಕ್ಕಚಿಕ್ಕ ಕವರುಗಳಲ್ಲಿ ಹಾಕಿಟ್ಟು ಮಾರುತ್ತಿದ್ದರು. ಹತ್ತು ರೂಪಾಯಿ ಕೊಟ್ಟು ಒಂದು ಪುಟ್ಟ ಕವರನ್ನು ಕೊಂಡೆ. ರುಚಿ ಥೇಟ್ ಹುಣಸೆಯದ್ದೇ! ನಾಲಿಗೆ ಚುರುಗುಟ್ಟುವಷ್ಟು ಹುಳಿ!

ಎಲೆಗಳುದುರಿಸಿಕೊಂಡ ಸಾಕಷ್ಟು ದೊಡ್ಡ ಗಾತ್ರದ ಕಾಂಡದ ಈ ಮರದ ಮುಂದೆ ನಾನು ನಿಂತಾಗ ಕುಬ್ಜನೆನಿಸಿತು. ಮಡಗಾಸ್ಕರ್, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಮೂಲದ ಈ ಮರವನ್ನು ನೋಡಿದಾಗ ಯಾರೋ ಮರವನ್ನು ಬೇರು ಸಮೇತ ಕಿತ್ತು ತಿರುಗಾ ಮುರುಗಾ ಇಟ್ಟಂತೆ ಕಂಡಿತು. ಮುಗಿಲು ಮುಟ್ಟುವ ಎತ್ತರ



ಮಾಂಡುವಿನ ಶಾಲೆಯೊಂದರ ಮುಂದೆ ಕಂಡ ಬಾವೋಬಾಬ್ ಮರ